**ವ್ಯಾಖ್ಯಾನ**

# <u>ತಾಳ ಬೇಕು ತಕ್ಕ ಮೇಳ ಬೇಕು</u>

ತಾಳ ಬೇಕು ತಕ್ಕ ಮೇಳ ಬೇಕು ಶಾಂತ ॥ ಪ ॥
ವೇಳೆ ಬೇಕು ಗಾನವನ್ನು ಕೇಳಬೇಕೆಂಬುವರಿಗೆ ॥ ಪ ॥

ಯತಿ ಪ್ರಾಸವಿರಬೇಕು ಗತಿಗೆ ನಿಲ್ಲಿಸಬೇಕು
ರತಿ ಪತಿ ಪಿತನೊಳು ಅತಿ ಪ್ರೇಮವಿರಬೇಕು ॥ 1 ॥

ಗಳ ಶುದ್ಧವಿರಬೇಕು ತಿಳಿದು ಪೇಳಲು ಬೇಕು
ಕಳವಳ ಬಿಡಬೇಕು ಕಳೆ ಮುಖವಿರಬೇಕು ॥ 2 ॥

ಅರಿತವರಿರಬೇಕು ಹರುಷ ಹೆಚ್ಚಲಿ ಬೇಕು
ಪುರಂದರ ವಿಠಲನೆ ಪರದೈವವೆನಬೇಕು ॥ 3 ॥

## ಕೀರ್ತನೆಯ ಚಿಂತನೆ:

**ಪರದೈವ –**

ಗಾನದ ಪರವಾಗಿ ಅರ್ಥೈಸಿ ಅಲ್ಲಿ ಅಲೌಕಿಕ ಕಾಣುವ ಬಗೆ ಒಂದು.  ಮತ್ತೊಂದು ಪೂರ್ಣ ಪಾರಮಾರ್ಥಿಕ.   ಸೂತ್ರದ - ಸಾಧನ ಅಧ್ಯಾಯ ಸಾರ ಸವಿಯುವದು ಮತ್ತೊಂದು.

ದಾಸವರೇಣ್ಯರ ಪದ.  ಸೂತ್ರ, ಶಾಸ್ತ್ರದ ಹೂರಣ.  ಸಾಧನೆಗೆ ದೀಪ.  ಅನೇಕ 'ಬೇಕು' ಗಳನ್ನು ಹೇಳುತ್ತಾರೆ.  ಯಾರಿಗೆ?  ಗಾನ ಕೇಳಬೇಕು ಎಂಬುವರಿಗೆ.  ಏನದು ಗಾನ?

ಗಾನ ಎಂದರೆ ನಾದ.  ನಾದದಿಂದ ಶಬ್ದ.  ಶಬ್ದ ರಾಶಿಯೇ ವೇದ.  ಗಾನ ಎಂದರೆ ವೇದ.  ಗಾನ ಎಂದರೆ ವೇದವೇದ್ಯ ಪರಮಾತ್ಮ.  ಗಾನ ಎಂದರೆ ಹಾಡಿ ಕೊಂಡಾಡು.  ಯಾರನ್ನು?

ಗಾನಲೋಲನನ್ನು. ಪರಮಾತ್ಮನನ್ನು. ದೇವರದೇವನನ್ನು ವೇದವೇ ಹಾಡಿ ಸ್ತುತಿಸುವದು. ಅದಕ್ಕಾಗಿ ಗಾನ ಎಂದರೆ ವೇದ.

ಗಾನ ಎಂದರೆ ವೇದವೇದ್ಯ ಶ್ರೀ ಹರಿ. ಗಾನ ಕೇಳ ಬೇಕೆಂಬುವರಿಗೆ ಅಂದರೆ –

ವೇದದಿಂದ ವೇದ್ಯನನ್ನು ಪಡೆಯ ಬಯಸುವವರಿಗೆ. ಮೋಕ್ಷಾಪೇಕ್ಷಿಗಳಿಗೆ. ಮತ್ತೆ ಗಾನದಿಂದ ಆನಂದ. ಗಾನ ಹರಿಯ ಸ್ತುತಿ. ಹರಿಸ್ತುತಿ ಶ್ರವಣ, ಮನನ, ಧ್ಯಾನದಿಂದ ಶಾಶ್ವತ ಆನಂದ. ಅದುವೇ ಸ್ವರೂಪಾನಂದ. ಅದುವೇ ಮೋಕ್ಷ. ಅದಕ್ಕಾಗಿ ಗಾನ ಕೇಳ ಬಯಸುವವರಿಗೆ ಅಂದರೆ ಮುಮುಕ್ಷುಗಳಿಗೆ.

ಮೋಕ್ಷ ಬಯಸುವವರಿಗೆ ಅನೇಕ 'ಬೇಕು' ಎಂಬ ಅರ್ಹತೆ ಹೇಳುತ್ತಾರೆ.—

**೧ - ತಾಳ ಬೇಕು**

ಅಂದರೆ ತಾಳ್ಮೆ, ಸಹನೆ ಬೇಕು. ತಾಳುವಿಕೆ ಎಂಬ ತಪ ಬೇಕು.
ಅಥಃ ಬ್ರಹ್ಮ ಜಿಜ್ಞಾಸಾ - ಅಥಃ ಅಂದರೆ ಅನಂತರ. ಶಮ, ದಮ, ತಾಳ್ಮೆ, ಮೊದಲಾದ ಗುಣ ಗಳಿಸಿದ ಮೇಲೆ ಬ್ರಹ್ಮನ ಜಿಜ್ಞಾಸೆ ಮಾಡಿ. ಅದಕ್ಕೆ ಮೋಕ್ಷ ವೆಂಬ ಫಲವಿದೆ. ಅತಃ -ಅದಕ್ಕಾಗಿ ಬ್ರಹ್ಮ ಜಿಜ್ಞಾಸೆ ಮಾಡಿ.

**೨ - ತಕ್ಕ ಮೇಳ ಬೇಕು**

ಯಾವದು ತಕ್ಕ ಮೇಳ? ವಿರಕ್ತಿ, ಭಕ್ತಿ, ಉಪಾಸನೆ, ಜ್ಞಾನಗಳ ಮೇಳ ಬೇಕು. (ಸಾಧನ ಅಧ್ಯಾಯದ ನಾಲ್ಕು ಪಾದಗಳು) ಈ ಸಮ್ಮೇಳನದಿಂದ ಹರಿ ಅನುಗ್ರಹ. ಅದರಿಂದ ಶಾಶ್ವತ ಸುಖ. ಈ ಸಮ್ಮೇಳನ ದೊರೆಯುವ ಬಗೆ? ಸಜ್ಜನ ಮೇಳದಿಂದ. ಸಾಧು ಸಂಗದಿಂದ. ಲಿಂಗದೇಹ ಭಂಗ. ಸಜ್ಜನರ ಸಂಗವಾಗಲಿ. ವಿಷ್ಣು ಭಕ್ತರ ಸಖ್ಯವಾಗಲಿ.

**೩ - ಶಾಂತ ವೇಳೆ ಬೇಕು**

ಗಾನ - ಹರಿಮಹಾತ್ಮೆ ಕೇಳಬೇಕು. ಮನ ಶಾಂತಿ ಬೇಕು. ಶಾಂತ ಕಾಲ ಬೇಕು. ಮನ ಗೊಂದಲದ ಗೂಡು. ಸಂಶಯ, ಕೋಪಗಳ ಬೀಡು. ಮಹಾತ್ಮೆ ರುಚಿಸುವದಿಲ್ಲ. ಅರಿಷಡ್ ವೈರಿಗಳು ಬೇಡ. ಗಡಿಬಿಡಿಯ ಕಾಲ. ಆಸನ ಜಯವಿಲ್ಲ. ಅಕಾಲ. ಅಶಾಂತ. ಇಂಥ ಕಾಲ ಸಲ್ಲ. ಶಾಂತ ಕಾಲ. ಸಾಕಷ್ಟು ಕಾಲ. ಯೋಗ್ಯ ಕಾಲ. ಮನಃ ಪ್ರಸನ್ನತೆಯ ಕಾಲ. ಏಕಾಗ್ರತೆ. ಧ್ಯಾನಕ್ಕೆ ಗಾನಕ್ಕೆ ಅನಕೂಲ.

ಶಾಂತ ವೇಳೆ ಬೇಕು - ವೇಳೆ - ಕಾಲ.  ಕಾಲ ಎಂದರೆ ಕಾಲನಾಮಕ ಪರಮಾತ್ಮ.  ಖಂಡ, ಅಖಂಡ ಕಾಲದಲ್ಲಿ ವ್ಯಾಪ್ತನಾಗಿ, ಅನಾದಿ ಅನಂತ ಕಾಲ ವ್ಯಾಪ್ತನಾಗಿ ಕಾಲಾಂತರ್ಯಾಮಿ. ತ್ರಿಕಾಲ ಬಲ್ಲವನಾಗಿ ಕಾಲಜ್ಞ.  ಸರ್ವಕಾಲ ಅವನ ಅಧೀನವಾಗಿ, ಕಾಲ ಮೀರಿ ನಿಂತವನಾಗಿ ಕಾಲ ನಿಯಾಮಕ. ಯುಗಪ್ರವರ್ತಕನಾಗಿ ಕಾಲಪ್ರವರ್ತಕ. ಲಯಕಾಲಕನಾಗಿ ಕಾಲನಿವರ್ತಕ.

ಇಂತು ಮಹಾಕಾಲನ ಚಿಂತನ ಮಾಡಲು ಅದುವೇ ಶಾಂತ ಕಾಲ.  ಹರಿ ಸ್ಮರಣೆ ಮಾಡೋ ನಿರಂತರಾ ಅವನ ಗಾನ ಮಾಡಲು - ಪರಮಾತ್ಮ ನಮ್ಮ ಕಾಲವನ್ನು ಸುಖಮಯ (ಶಾಂತ - ಶಂ = ಸುಖ. ಸುಖಾಂತ ಕಾಲ) ಮಾಡುತ್ತಾನೆ.

**ಯತಿ ಪ್ರಾಸ ಬೇಕು ಗತಿಗೆ ನಿಲ್ಲಿಸ ಬೇಕು**
**ರತಿಪತಿಪಿತನೊಳು ಅತಿ ಪ್ರೇಮ ಬೇಕು    |೧|**

**೪ - ಯತಿ - ಪ್ರಾಸ - ಗತಿ ಬೇಕು**
ಯತಿ = ಯ = ಏಕಾಕ್ಷರ ನಾಮ ಪರಮಾತ್ಮ. ತಿ = ತರತಿ – ದಾಟಿಸುತ್ತಾನೆ ಸಂಸಾರ ಸಾಗರ.  ದೇಹ ನಾವೆ.  ಜೀವ ಯಾತ್ರಿಕ.  ಪರಮಾತ್ಮ ಅಂಬಿಗ.

ಅವನ ಮಹಾತ್ಮೆ ಎಂಬ ತಾಳ ಬೇಕು. ಅವನ ಮಹಾತ್ಮೆಯ ಮೇಳ ಎಂಬ ಪ್ರಾಸ ಎಂದರೆ ಲಯಬದ್ಧ ಅರಿವು ನಮಗೆ ಬೇಕು.  ರಕ್ಷತಿ ಎಂಬ ಪ್ರಾಸ, ವಿಶ್ವಾಸ ಬೇಕು.  ಆಗ ಅಂಬಿಗ ಭವಸಾಗರ ಸುಲಭದಲಿ ತರತಿ.

ಮತ್ತೆ - ಯತಿ ಅಂದರೆ ಯತಿವರೇಣ್ಯರು.  ಮತಿವರೇಣ್ಯರು.  ಶ್ರೀ ಮಧ್ವಾಚಾರ್ಯರು.  ಸರ್ವಮೂಲ ಗ್ರಂಥಗಳು ಅವರ ಮಾತು.  ಮತ್ತು ಮತ. ಶ್ರುತಿ ಸಮ್ಮತ.  ಅವುಗಳ ಅಧ್ಯಯನ ಮನನ ಧ್ಯಾನ ನಮ್ಮ ಸಾಧನೆ.  ಅವರ ಮಾತು ನಮ್ಮ ಆಚರಣೆಯಾಗ ಬೇಕು.  ಇಲ್ಲಿ ಪ್ರಾಸವಿರ ಬೇಕು. ದಿಕ್ಕು ತಪ್ಪಬಾರದು.

ತಾಳ ಬೇಕು.  ತಾಳ್ಮೆ ಬೇಕು.  ಸರ್ವಮೂಲಗ್ರಂಥಗಳ ಮೇಳ ಬೇಕು.  ಜ್ಞಾನ ಬೇಕು.  ಅನುಗ್ರಹವಾಗ ಬೇಕು.  ವಾಯು ದೇವರು ಸಾಕ್ಷಾತ್ಕಾರಕ್ಕೆ ಕರೆದೊಯ್ಯ ಬೇಕು.  ನಾವು ದೀನಂ ದೂನಂ.

**೫ ರತಿಪತಿಪಿತ -** ಕಾಮನಯ್ಯ - ಶ್ರೀ ಮನ್ನಾರಾಯಣನ ಅತಿ ಪ್ರೀತಿ ಗಳಿಸ ಬೇಕು.

ಹರಿಪ್ರಸಾದ ಕೊಡಿಸಬೇಕು. -  ಈ ಗತಿಗೆ ನಿಲ್ಲಿಸ ಬೇಕು - ಸದ್ಗತಿ ಕೊಡಿಸ ಬೇಕು. ಮತ್ತೆ- ತನು ರಥ. ಬುದ್ಧಿ ಸಾರಥಿ.  ಮನ ಲಗಾಮು.  ಇಂದ್ರಿಯಗಳು ಕುದುರೆಗಳು. ಸಾಧನೆಯಲ್ಲಿ ಯತಿ - ಆಸಕ್ತಿ ಇರಬೇಕು.

ಎಚ್ಚರವಿರ ಬೇಕು. ಬುದ್ಧಿ, ಮನಸ್ಸನ್ನು ನಿಶ್ಚಯಿಸ ಬೇಕು. ಬುದ್ಧಿಯ ಮಾತು ಮನ ಕೇಳ ಬೇಕು. ಮನ ಇಂದ್ರಿಯಗಳ ನಿಗ್ರಹಿಸ ಬೇಕು. ಇದು ಪ್ರಾಸ ಬದ್ಧ. ಲಯ ತಪ್ಪಬಾರದು.

ಬುದ್ಧಿ ಮನ, ಇಂದ್ರಿಯಗಳಲ್ಲಿ ಪ್ರಾಸ ಬದ್ಧ ತಕ್ಕ ತಾಳ ಮೇಳ ಬೇಕು. ಇಂದ್ರಿಯ ಎಂಬ ಕುದುರೆ. ವಿಷಯ ಸುಖ ಎಂಬ ಆಹಾರ. ಕುದುರೆ ಅತ್ತ ವಾಲಬಾರದು. ನೇರ ಸಾಧನೆಯತ್ತ ಹೆಜ್ಜೆ ಹಾಕಬೇಕು.

**೬ - ಗಳ ಶುದ್ಧ ವಿರಬೇಕು ತಿಳಿದು ಹೇಳಲು ಬೇಕು**
**ಕಳವಳ ಬಿಡಬೇಕು ಕಳೆಮುಖವಿರ ಬೇಕು | ೨ |**

ಅರಿತವರಿರ ಬೇಕು ಹರುಷ ಹೆಚ್ಚಿಸ ಬೇಕು.

ವಕ್ತ್ರಾನುಕೂಲ್ಯ ಬೇಕು – ಗಳ ಶುದ್ಧ ಅಂದರೆ ಕಂಠ ಶುದ್ಧಿ. ವಾಕ್ ಶುದ್ಧಿ. ಕರ್ಣಪಾಟವ ಬೇಕು. ಹೇಳುವವರ ಮಾತು ಕೇಳುವವರಿಗೆ ತಿಳಿಯ ಬೇಕು. ಸ್ಪಷ್ಟವಿರ ಬೇಕು.

ಅರಿತವರಿರ ಬೇಕು ಹರುಷ ಹೆಚ್ಚಿಸ ಬೇಕು. ತಿಳಿದು ಹೇಳಲು ಬೇಕು - ಹೇಳಲು ಹೊರಟಿದ್ದು ಮೊದಲು ತಾವು ತಿಳಿದಿರಬೇಕು. ತಾವು ಹೇಳುವದರ ಅರಿವು ಇರಬೇಕು. ಗುರುಗಳ ಸಲ್ಲಕ್ಷಣ ತುಂಬಿರ ಬೇಕು. ವಕ್ತಾ ಆಪ್ತನಾಗಿರ ಬೇಕು.

ಶ್ರೋತಾನುಕೂಲ್ಯ - ಕಳೆಮುಖವಿರಬೇಕು. ಕಳೆ ಎಂದರೆ ತೇಜ. ತೇಜ ಅಂದರೆ ಜ್ಞಾನ. ಜ್ಞಾನದ ಹಸಿವು ಇರಬೇಕು. ತಿಳಿಯುವ ಬಯಕೆ ಬೇಕು. ಕಳವಳ ಚಿಂತೆ, ಭಯ ಇರಬಾರದು.

ಚಿಂತ್ಯಾಕ ಮಾಡ್ತೀಯಾ ಚಿನುಮಯನಿದ್ದಾನೆ. ನಿಶ್ಚಿಂತತೆ ಜ್ಞಾನ ಗ್ರಹಣಕ್ಕೆ ಪೋಷಕ.

ಪ್ರಸಂಗಾನುಕೂಲ್ಯ - ಗಾನ ಕೇಳ ಬೇಕೆಂಬ ಪ್ರಸಂಗ - ಮೋಕ್ಷಾಪೇಕ್ಷದ ಸತ್ ಪ್ರಸಂಗ. ಸುಳ್ಳು ಮೋಸ ಕಪಟಗಳಾದಿ ಇಲ್ಲ. ಹರುಷ ಹೆಚ್ಚಿಸುವ ಪ್ರಸಂಗ. ಆನಂದಮಯನ ಕಥೆ ಆನಂದದಾಯಕ.

ಶಾಶ್ವತ ಆನಂದ - ಮೋಕ್ಷ ಕೊಡುವಂತಹದ್ದು

ಸರ್ವೋತ್ತಮ ಸರ್ವ ಶ್ರೇಷ್ಠ ವಕ್ತಾ ಭಗವಾನ್ ವೇದವ್ಯಾಸರು. ಅವರ ಇಂಗಿತ ಬಲ್ಲ ಸರ್ವಶ್ರೇಷ್ಠ ಶ್ರೋತಾ ಶ್ರೀ ಮದಾಚಾರ್ಯರು.

ವ್ಯಾಸರು ತಿಳಿಸಿದ್ದನ್ನು ನಮಗೆ ತಿಳಿಸುವವರು ಜೀವೋತ್ತಮ ಶ್ರೇಷ್ಠ ವಕ್ತಾ ಶ್ರೀ ಮನ್ ಮಧ್ವಾಚಾರ್ಯರು. ಆದುದರಿಂದ ಶ್ರೀ ಮದಾಚಾರ್ಯರ ಶಾಸ್ತ್ರಕ್ಕೆ ಮೂರೂ ಅನಕೂಲತೆಗಳುಂಟು. ಅದು ಅತ್ಯಂತ ಶ್ರೇಷ್ಠ. ಅಧ್ಯಯನೀಯ. ಸಾಧನೀಯ. ಅದಕ್ಕಾಗಿ ನಾವು ಆಚಾರ್ಯ ಶಾಸ್ತ್ರ ಗುರುಗಳಿಂದ ಕೇಳಿ ತಿಳಿಯ ಬೇಕು. ತಿಳಿದು ಮತ್ತೆ ಮತ್ತೆ ಕೇಳಬೇಕು. ಸಾಧನೆ ಮಾಡ ಬೇಕು. ಎಂಬುದು ದಾಸರ ಅಭಿಮತ.

ಒಟ್ಟು ತಥ್ಯ - ಮೋಕ್ಷಾಪೇಕ್ಷಿಗೆ ಶಾಸ್ತ್ರ ಎಂಬ ತಾಳ ಬೇಕು. ತಿಳಿಯಲು ತಾಳ್ಮೆ ಬೇಕು. ಹರಿ ವಾಯು ಗುರುಗಳ ಅನುಗ್ರಹ ಮೇಳ ಬೇಕು. ಜ್ಞಾನ ಭಕ್ತಿ ವಿರಕ್ತಿ ಸಮ್ಮೇಳನ ಬೇಕು ಶಾಂತ ಸಮಯ ಬೇಕು. ಅಧ್ಯಾತ್ಮಿಕ ಪ್ರಾಸ ಬೇಕು. ಅಂತಃ, ಬಾಹ್ಯಾದಿ ಶುದ್ಧಿ ಬೇಕು. ಸದ್ಗುರುಬೇಕು. ಹರಿ ಮಹಾತ್ಮೆ ತಿಳಿಯ ಬೇಕು. ತಿಳಿಸ ಬೇಕು.

**೬ - ಪುರಂದರವಿಠ್ಠಲನೇ ಪರದೈವ ಎನಬೇಕು | ೩ |**

ಸಾಧನೆಯ ಕೊನೆ ಏನು? **'ಆತ್ಮೇತಿ ಉಪಾಸೀತ್'**

ಶ್ರೀ ಹರಿ ಮಮ ಸ್ವಾಮಿ. ಸರ್ವರ ಸ್ವಾಮಿ. ಜಗದೊಡೆಯ. ಪರದೈವ. ಹೆದ್ದೈವ. ಸರ್ವೋತ್ತಮ. ಸ್ವತಂತ್ರ.ಸರ್ವಜ್ಞ. ಗುಣ ಪೂರ್ಣ. ನಿರ್ದೋಷ. ಜ್ಞೇಯ. ಗಮ್ಯ.

**'ಸಾ ಕಾಷ್ಠಾ ಸಾ ಪರಾ'**

ಹೀಗೆ ಪುರಂದರ ವಿಠ್ಠಲನೇ ಪರದೈವವೆಂದು ತಿಳಿಯ ಬೇಕು. ತಿಳಿದು ಸಾರ ಬೇಕು. ಇದು ಸಾಧನೆಯ ಸಾರ ಎಂದರು ದಾಸರು.

ದಾಸರ ಅಂತರ್ಗತ ಮುಖ್ಯ ಪ್ರಾಣರ ಅಂತರ್ಗತ ರುಕ್ಮಿಣಿ ವಿಠ್ಠಲನಿಗೆ ಸಾಸಿರ ನಮನಗಳು.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ